**ಜೆ.ಎಸ್.ವಿ. ವಿ. ಸಂಸ್ಥೆಯ**
**ದಾನಪ್ಪ ಗುರುಸಿದ್ದಪ್ಪ ಮೇಲ್ಮಾಳಗಿ ಆಯುರ್ವೇದಿಕ್ ಮೆಡಿಕಲ್ ಕಾಲೇಜ್ ಮತ್ತು ಆಸ್ಪತ್ರೆ,**
**ಡಾ: ಎಸ್.ವ್ಹಿ. ಸವಡಿ ರಸ್ತೆ, ಶಿವಾನಂದ ನಗರ, ಗದಗ–582103.**

ನಂ: ಡಿಜಿಎಂ/ಎಎಂಸಿ/ಸಿಬ್ಬಂದಿ/ ಬ್ಯಾಕ್ ಲಾಗ್/ನೇಮಕಾತಿ/2019-20, ದಿನಾಂಕ:23-01-2020

## ಬ್ಯಾಕ್‌ಲಾಗ್ ಬೋಧಕ ಹುದ್ದೆಗಾಗಿ ವಿಶೇಷ ನೇಮಕಾತಿ ಅಧಿಸೂಚನೆ

ಆಯುಷ್ ನಿರ್ದೇಶನಾಲಯದ ಪತ್ರ ಸಂಖ್ಯೆ:ಆಯುಷ್:23:ಸಿಬ್ಬಂದಿ(5):12-13(ಭಾಗ–2) ದಿನಾಂಕ: 22-08-2019 ಮತ್ತು 18-01-2020 ರಲ್ಲಿ ಅನುಮೋದಿಸಿರುವಂತೆ ಜೆ.ಎಸ್.ವಿ.ವಿ. ಸಂಸ್ಥೆಯ ದಾನಪ್ಪ ಗುರುಸಿದ್ದಪ್ಪ ಮೇಲ್ಮಾಳಗಿ ಆಯುರ್ವೇದಿಕ್ ಮೆಡಿಕಲ್ ಕಾಲೇಜ್ ಮತ್ತು ಆಸ್ಪತ್ರೆ, ಗದಗ**(ಕರ್ನಾಟಕ ಸರಕಾರದಿಂದ ಅನುದಾನಿತ ಶಿಕ್ಷಣ ಸಂಸ್ಥೆ)**ಇಲ್ಲಿ ಸಮಾಜ ಕಲ್ಯಾಣ ಇಲಾಖೆ ಗುರುತಿಸಿರುವ ಬೋಧಕ ವೃಂದದ ಉಪನ್ಯಾಸಕರು 01- ಪ.ಜಾತಿ ಮತ್ತು 02- ಪ.ಪಂಗಡದ ಬ್ಯಾಕ್‌ಲಾಗ್ ಹುದ್ದೆಗಳ ವಿಶೇಷ ನೇರ ನೇಮಕಾತಿಗೆ ಅರ್ಹ ಅಭ್ಯರ್ಥಿಗಳಿಂದ ದ್ವಿಪ್ರತಿಯಲ್ಲಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ನಿಗದಿತ ಅರ್ಜಿ ನಮೂನೆಗಳನ್ನು ದಿನಾಂಕ: 27-01-2020 ರಿಂದ ದಿನಾಂಕ: 17-02-2020 ರವರೆಗೆ ಅರ್ಜಿ ಶುಲ್ಕ ರೂ:25/–ನ್ನು ಪಾವತಿಸಿ ಕರ್ತವ್ಯದ ಅವಧಿಯಲ್ಲಿ ಪಡೆಯಬಹುದಾಗಿದೆ. ಭರ್ತಿ ಮಾಡಲಾದ ಅರ್ಜಿ ಮತ್ತು ದಾಖಲೆಗಳನ್ನು ನೇರವಾಗಿ ಅಥವಾ ರಿಜಿಸ್ಟರ್ಡ್ ಅಂಚೆ ಮೂಲಕ ದಿನಾಂಕ:20-02-2020ರ ಸಂಜೆ 4.00 ಗಂಟೆಯೊಳಗೆ ಮಹಾವಿದ್ಯಾಲಯಕ್ಕೆ ಸಲ್ಲಿಸಲು ಅವಕಾಶ ಕಲ್ಪಿಸಿದೆ.

**1. ಬ್ಯಾಕ್ ಲಾಗ್ ಹುದ್ದೆಗಳ ಅನುಸೂಚಿ :-**

| ಕ್ರಮ ಸಂಖ್ಯೆ | ಸಮಾಜ ಕಲ್ಯಾಣ ಇಲಾಖೆ ಗುರುತಿಸಿರುವ ಮೀಸಲಾತಿ ಹಾಗೂ ವಿಷಯ | **ವೇತನ ಶ್ರೇಣಿ** | ವಿದ್ಯಾರ್ಹತೆ | ಷ.ರಾ. |
|---|---|---|---|---|
| 1 | ಪರಿಶಿಷ್ಟ ಜಾತಿ ವರ್ಗಕ್ಕೆ ರಸಶಾಸ್ತ್ರ /ಭೈಷಜ್ಯಕಲ್ಪನ | Rs. 15600-39100 AGP 6000(ಎಐಸಿಟಿಇ ವೇತನ ಶ್ರೇಣಿ)ಹಾಗೂ ಅನ್ವಯಿಸುವ ಭತ್ಯೆಗಳು | MUST POSSESES A BACHEIOR DEGREE IN AYURVEDA & POST GRADUATE DEGREE IN RASA SHASTRA & BHAISHAJYA KALPANA / RASASHASTRA / BHAISHAJYA KALPANA AWARDED BY AN UNIVERSITY ESTABLISHED BY LAW IN INDIA & INCLUDED IN THE II SCHEDULE TO INDIAN MEDICINE CENTRAL COUNCIL ACT. 1970 (CENTRAL ACT 48 OF 1970) | ಪ್ರಚಲಿತದಲ್ಲಿರುವ ಪ.ಜಾತಿ ಮತ್ತು ಪ.ಪಂಗಡಗಳ ಅಭ್ಯರ್ಥಿಗಳ ನೇಮಕಾತಿಗೆ ನಿಗದಿಪಡಿಸಿರುವ ಗರಿಷ್ಠ ವಯೋಮಿತಿ 40 ವರ್ಷ |

| | | | | |
|---|---|---|---|---|
| 2 | ಪರಿಶಿಷ್ಟ ಪಂಗಡ ಕೌಮಾರಬೃತ್ಯ | Rs. 15600-39100 AGP 6000(ಎಐಸಿಟಿಇ ವೇತನ ಶ್ರೇಣಿ)ಹಾಗೂ ಅನ್ವಯಿಸುವ ಭತ್ಯೆಗಳು | MUST POSSESES A BACHEIOR DEGREE IN AYURVEDA & POST GRADUATE DEGREE IN KOUMARA BRITYA AWARDED BY AN UNIVERSITY ESTABLISHED BY LAW IN INDIA & INCLUDED IN THE II SCHEDULE TO INDIAN MEDICINE CENTRAL COUNCIL ACT. 1970 (CENTRAL ACT 48 OF 1970) | ಪ್ರಚಲಿತದಲ್ಲಿರುವ ಪ.ಜಾತಿ ಮತ್ತು ಪ.ಪಂಗಡಗಳ ಅಭ್ಯರ್ಥಿಗಳ ನೇಮಕಾತಿಗೆ ನಿಗದಿಪಡಿಸಿರುವ ಗರಿಷ್ಠ ವಯೋಮಿತಿ 40ವರ್ಷ |
| 3 | ಪರಿಶಿಷ್ಟ ಪಂಗಡ ಅಗದತಂತ್ರ | Rs. 15600-39100 AGP 6000(ಎಐಸಿಟಿಇ ವೇತನ ಶ್ರೇಣಿ)ಹಾಗೂ ಅನ್ವಯಿಸುವ ಭತ್ಯೆಗಳು | MUST POSSESES A BACHEIOR DEGREE IN AYURVEDA & POST GRADUATE DEGREE IN AGADA TANTRA AWARDED BY AN UNIVERSITY ESTABLISHED BY LAW IN INDIA & INCLUDED IN THE II SCHEDULE TO INDIAN MEDICINE CENTRAL COUNCIL ACT. 1970 (CENTRAL ACT 48 OF 1970) | ಪ್ರಚಲಿತದಲ್ಲಿರುವ ಪ.ಜಾತಿ ಮತ್ತು ಪ.ಪಂಗಡಗಳ ಅಭ್ಯರ್ಥಿಗಳ ನೇಮಕಾತಿಗೆ ನಿಗದಿಪಡಿಸಿರುವ ಗರಿಷ್ಠ ವಯೋಮಿತಿ 40ವರ್ಷ |

2. **ಅರ್ಹತಾ ನಿಭಂದನೆಗಳು:**

1. ಅಭ್ಯರ್ಥಿಯು ಭಾರತೀಯ ನಾಗರೀಕರಾಗಿರತಕ್ಕದ್ದು,
2. ಅಭ್ಯರ್ಥಿಯು ಒಬ್ಬ ಜೀವಂ0ತ ಪತ್ನಿಗಿಂತ ಹೆಚ್ಚು ಮಂದಿ ಪತ್ನಿಯರನ್ನು ಹೊಂದಿರುವ ಪುರುಷ ಅಭ್ಯರ್ಥಿ ಮತ್ತು ಈಗಾಗಲೇ ಇನ್ನೊಬ್ಬ ಹೆಂಡತಿ ಇರುವ ವ್ಯಕ್ತಿಯನ್ನು ಮದುವೆಯಾಗಿರುವ ಮಹಿಳಾ ಅಭ್ಯರ್ಥಿಯು ನೇಮಕಾತಿಗೆ ಅರ್ಹರಾಗಿರುವದಿಲ್ಲ.
3. ಅಭ್ಯರ್ಥಿಯು ಮಾನಸಿಕವಾಗಿ ಮತ್ತು ದೈಹಿಕವಾಗಿ ಆರೋಗ್ಯವಂತರಾಗಿರಬೇಕು ಮತ್ತು ಅವರ ನೇಮಕಾತಿಯು ಕರ್ತವ್ಯಗಳ ದಕ್ಷ ನಿರ್ವಹಣೆಗೆ ಅಡಚಣೆವನ್ನುಂಟು ಮಾಡುವ ಯಾವುದೇ ದೈಹಿಕ ನ್ಯೂನತೆಯನ್ನು ಹೊಂದಿರಬಾರದು. ನಿಯಾಮಾನುಸಾರ ಹುದ್ದೆಗೆ ಸಾಮಾನ್ಯ ದೇಹ-ದಾರ್ಢ್ಯತೆ ಹೊಂದಿರಬೇಕು.
4. ಅಭ್ಯರ್ಥಿಯು ದೈಹಿಕವಾಗಿ ಅನರ್ಹರಾಗಿದ್ದಾರೆಂಬುದಾಗಿ ವೈದ್ಯಕೀಯ ಮಂಡಳಿಯ ವರದಿಯ ಮೇಲೆ ಅನರ್ಹರೆಂಬುದಾಗಿ ತಿರಸ್ಕರಿಸುವ ಪೂರ್ಣ ಅಧಿಕಾರವನ್ನು ಆಡಳಿತ ಮಂಡಳಿಯು/ಆಯುಷ್ ಇಲಾಖೆ ಬೆಂಗಳೂರು ಇವರು ಹೊಂದಿರುತ್ತಾರೆ.
5. ಅಭ್ಯರ್ಥಿಯು ನಿಗದಿತ ಶೈಕ್ಷಣಿಕ ಅರ್ಹತೆಯ ಜೊತೆಗೆ ಈ ಮೇಲ್ಕಂಡ ಅರ್ಹತೆಗಳನ್ನು ಹೊಂದಿರುವ ಅಭ್ಯರ್ಥಿಗಳು ನೇಮಕಾತಿಗಾಗಿ ಅರ್ಜಿ ಸಲ್ಲಿಸಲು ಅರ್ಹತೆಯನ್ನು ಹೊಂದಿರುತ್ತಾರೆ.

**ಅರ್ಜಿಶುಲ್ಕ:** ಅಭ್ಯರ್ಥಿಯು ನಿಗಧಿತ ಅರ್ಜಿ ನಮೂನೆಗಳನ್ನು ಖುದ್ದಾಗಿ **ಪ್ರಾಚಾರ್ಯರು ಡಿ.ಜಿ.ಎಂ. ಆಯುರ್ವೇದಿಕ್ ಮೆಡಿಕಲ್ ಕಾಲೇಜ್, ಗದಗ** ಇವರಿಂದ ರೂ:25/- ಹಿಂಪಾವತಿಸಲಾಗದ ಶುಲ್ಕವನ್ನು ನಗದಾಗಿ ಪಾವತಿಸಿ ಆಡಳಿತ ಮಂಡಳಿ/ಆಯುಷ್ ಇಲಾಖೆ ನಿಗದಿಪಡಿಸಿದ ಅರ್ಜಿ ನಮೂನೆಗಳನ್ನು ಮಹಾವಿದ್ಯಾಲಯದ ಕರ್ತವ್ಯದ ಅವದಿಯಲ್ಲಿ ದಿನಾಂಕ: 27-01-2020 ರಿಂದ

ದಿನಾಂಕ:17-02-2020 ರ ವರೆಗೆ ಪಡೆಯಬಹುದು. ಅರ್ಜಿ ನಮೂನೆಯನ್ನು ಅಂಚೆ ಮುಖಾಂತರ ಪಡೆಯುವ ಅಭ್ಯರ್ಥಿಗಳು ಸ್ವ-ವಿಳಾಸ ಹೊಂದಿರುವ ಲಕೋಟೆಯಲ್ಲಿ ಅವಶ್ಯವಿರುವ ಅಂಚೆ ಚೀಟಿಗಳನ್ನು ಅಂಟಿಸಿ ನಿಗದಿತ ಶುಲ್ಕಕ್ಕೆ **ಪ್ರಾಚಾರ್ಯರು ಡಿ.ಜಿ.ಎಂ. ಆಯುರ್ವೇದಿಕ್ ಮೆಡಿಕಲ್ ಕಾಲೇಜ್, ಗದಗ ಇವರ ಹೆಸರಿಗೆ ಡಿ.ಡಿ/ಪೋಸ್ಟಲ್‌ಆರ್ಡರ್ ಲಗತ್ತಿಸಿ ಪ್ರತ್ಯೇಕ ಲಕೋಟೆಯಲ್ಲಿರಿಸಿ ಅರ್ಜಿಗಳನ್ನು** ನಿಗದಿಪಡಿಸಿದ **ದಿನಾಂಕದವರೆಗೆ ಪಡೆಯಬಹುದಾಗಿದೆ.** ನಿಗದಿತ ಕೊನೆಯ ದಿನಾಂಕದೊಳಗೆ ಭರ್ತಿ ಮಾಡಲಾದ ಅರ್ಜಿ ನಮೂನೆ ಸ್ವೀಕೃತವಾಗದಿದ್ದಲ್ಲಿ ಅಂಚೆ ವಿಳಂಬಕ್ಕೆ ಆಡಳಿತ ಮಂಡಳಿ/ಆಯುಷ್ ಇಲಾಖೆ ಹೊಣೆಗಾರರಲ್ಲ ಮತ್ತು ಆಡಳಿತ ಮಂಡಳಿ/ಆಯುಷ್ ಇಲಾಖೆ ಅನುಮೋದಿಸಿದ ಅರ್ಜಿ ನಮೂನೆಯಲ್ಲಿಯೇ ಸಲ್ಲಿಸಬೇಕು. ಇತರೆ ಸ್ವ-ಮನವಿಗಳು/ಅರ್ಜಿಗಳನ್ನು ಪರಿಗಣಿಸದೇ ತಿರಸ್ಕರಿಸಲಾಗುವುದು.

**3.ಪ್ರಮುಖ ಸೂಚನೆಗಳು:**

1. **ಸರಕಾರಿ ಆದೇಶ ಸಂಖ್ಯೆ: ಆಕುಕ/89/ಪಿಟಿಡಿ/2014, ದಿನಾಂಕ: 24.01.2015 ರನ್ವಯ ಈ ಹುದ್ದೆಗಳು ಅನುಚ್ಛೇದ 371 (ಜೆ) ಹೈದರಾಬಾದ್ ಕರ್ನಾಟಕ ಮೀಸಲಾತಿ ವ್ಯಾಪ್ತಿಗೆ ಒಳಪಡುವುದಿಲ್ಲ.**
2. **ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ(ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸೇರಿದ ವ್ಯಕ್ತಿಗಳಿಗೆ ಮೀಸಲಾದ ಭರ್ತಿಮಾಡದ ಖಾಲಿ ಹುದ್ದೆಗಳು) (ವಿಶೇಷ ನೇಮಕಾತಿ)ನಿಯಮಗಳು 2001 ಮತ್ತು ಚಾಲ್ತಿ ನಿಯಮಗಳನ್ವಯ ಅಭ್ಯರ್ಥಿಯು ಅರ್ಜಿ ಸಲ್ಲಿಸುವ ಕೊನೆಯ ದಿನಾಂಕಕ್ಕೆ ಕನಿಷ್ಟ 18 ವರ್ಷ ಪೂರೈಸಿರಬೇಕು ಹಾಗೂ ಗರಿಷ್ಠ ವಯೋಮಿತಿಯು 40 ವರ್ಷ ಮೀರಿರಬಾರದು.**
3. **ಪರಂತು ಇಬ್ಬರು ಅಥವಾ ಹೆಚ್ಚಿನ ಅಭ್ಯರ್ಥಿಗಳು ಅರ್ಹತಾ ಪರೀಕ್ಷೆಯಲ್ಲಿ ಒಟ್ಟು ಅಂಕಗಳ ಸಮಾನವಾಗಿ ಶೇಕಡಾ ಅಂಕಗಳನ್ನು ಪಡೆದಿದ್ದರೆ ಅಂಥ ಅಭ್ಯರ್ಥಿಗಳ ಸಂದರ್ಭದಲ್ಲಿನ ಅರ್ಹತಾ ಕ್ರಮವನ್ನು ಅವರ ವಯಸ್ಸಿನ ಆಧಾರದ ಮೇಲೆ ನಿಗದಿಪಡಿಸಲಾಗುವುದು. ವಯಸ್ಸಿನಲ್ಲಿ ಹಿರಿಯನಾಗಿರುವ ಅಭ್ಯರ್ಥಿಯ ಅರ್ಹತಾ ಕ್ರಮದಲ್ಲಿ ಮೇಲೆ ಇರಿಸಲಾಗುವುದು.**
4. **ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ:10 ಸೇನೆನಿ:2019 ದಿನಾಂಕ:17-07-2019 ರನ್ವಯ ರಾಜ್ಯ ಸಿವಿಲ್/ವಿಶೇಷ ಬ್ಯಾಕ್‌ಲಾಗ್ ಪ.ಜಾತಿ./ಪ.ಪಂಗಡ ಹುದ್ದೆಗಳಿಗೆ ನೇಮಕಾತಿಯಲ್ಲಿ ಆಯ್ಕೆಯಾದ ಅಭ್ಯರ್ಥಿಗಳ ಸಿಂಧುತ್ವ ಪ್ರಮಾಣ ಪತ್ರ ಹಾಗೂ ಇನ್ನಿತರ ದಾಖಲಾತಿಗಳ ಜೊತೆಗೆ ಅಭ್ಯರ್ಥಿಗಳು ಸಲ್ಲಿಸುವ ಅಂಕಪಟ್ಟಿ/ಶೈಕ್ಷಣಿಕ ಪ್ರಮಾಣಪತ್ರಗಳ ನೈಜತೆಯನ್ನು ಅವುಗಳನ್ನು ವಿತರಿಸಿದ ವಿಶ್ವವಿದ್ಯಾಲಯಗಳು/ಶೈಕ್ಷಣಿಕ ಪರೀಕ್ಷಾ ಮಂಡಳಿಯೊಂದಿಗೆ ಪರಿಶಿಲನೆ ನಡೆಸಿದ ನಂತರ ಅಂತಹ ಪ್ರಮಾಣ ಪತ್ರ ಹಾಗೂ ಇನ್ನಿತರ ದಾಖಲಾತಿಗಳು ಸಂಭಂದಿಸಿದ ವಿಶ್ವವಿದ್ಯಾಲಯಗಳು/ಶೈಕ್ಷಣಿಕ ಪರೀಕ್ಷಾ ಮಂಡಳಿಗಳಿಂದಲೇ ವಿತರಿಸಲಾದ ಪ್ರಮಾಣಪತ್ರಗಳೆಂದು ಖಾತ್ರಿಯಾಗುವ ಷರತ್ತಿಗೊಳಪಟ್ಟಿದೆ.**
5. ಲಕೋಟೆಯ ಮೇಲೆ Application for SC Backlog Post of Lecturer (Ayu) in ------------------ subject " or "Application for ST Backlog Post of Lecturer (Ayu) in ------------------ subject ಎಂದು ನಮೂದಿಸಬೇಕು.

6) ಭರ್ತಿ ಮಾಡಿದ ಅರ್ಜಿಗಳನ್ನು ಅಂಚೆ ಮೂಲಕ ಸ್ವೀಕರಿಸುವ ಕೊನೆಯ ದಿನಾಂಕವು ಸಾರ್ವತ್ರಿಕ ರಜಾ ದಿನವಾಗಿದ್ದರೆ ಆ ದಿನಾಂಕದ ಮಾರನೆಯ ಕೆಲಸದ ದಿನವು ಅರ್ಜಿ ಸ್ವೀಕರಿಸಲು ಕೊನೆಯ ದಿನಾಂಕವಾಗುವದು.

24/1/2020

ಪ್ರಾಚಾರ್ಯರು
ಡಿ.ಜಿ.ಎಂ.ಆಯುರ್ವೇದಿಕ್ ಮೆಡಿಕಲ್ ಕಾಲೇಜ್,
ಗದಗ.

PRINCIPAL
D.G.M. AYURVEDIC MEDICAL
COLLEGE & HOSPITAL, GADAG

ಚೇರಮನ್
ಜಗದ್ಗುರು ಶ್ರೀ ಶಿವಾನಂದ ವಿದ್ಯಾವರ್ಧಕ ಸಂಸ್ಥೆ,
ಡಿ.ಜಿ.ಎಂ.ಆಯುರ್ವೇದಿಕ್ ಮೆಡಿಕಲ್ ಕಾಲೇಜ್
ಗದಗ.